ಕರ್ನಾಟಕ ವಿಧಾನ ಸಭೆ

278 ಶ್ರೀ ಸಂಪಂಗಿ ಎನ್.

ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಶ್ರೀ ತಿರುಪತಿ-ತಿರುಮಲ ದೇವಸ್ಥಾನಕ್ಕೆ ರಾಜ್ಯ ಸರ್ಕಾರವು ಮಹಾರಾಜರ ಕಾಲದಲ್ಲಿ ಒದಗಿಸಿರುವಂತಹ ಆಭರಣ, ವಜ್ರ, ವೈಡೂರ್ಯಗಳು ಎಷ್ಟು; ವಿವರ ಒದಗಿಸುವುದು; ಇದರ ಅಂದಾಜು ಮೊತ್ತವೇನು;

ಕರ್ನಾಟಕ ಸರ್ಕಾರದಿಂದ ಮಹಾರಾಜರ ಕಾಲದಲ್ಲಿ ಒದಗಿಸಿರುವ ಆಭರಣಗಳು ಹಾಗೂ ಪೂಜಾ ಕೈಂಕರ್ಯದ ವಸ್ತುಗಳು ಈ ಕೆಳಕಂಡಂತಿವೆ.

ಕ್ರ.ಸಂ.	ಆಭರಣಗಳ ವಿವರಣೆ	ಸಂಖ್ಯೆ	ತೂಕ
1	ಚಿನ್ನದ ಛತ್ರಿ (ಕೊಡೆ) ಜೊತೆ ಬೆಳ್ಳಿಯ ತಟ್ಟೆ,	01	401 ತೊಲ ಬಂಗಾರ ಮತ್ತು 517 ತೊಲ ಬೆಳ್ಳಿ
2	ಪ್ಲಾಟಿನಂ ಕಂಠೀಹಾರ	01	23-03-0 ತೊಲ
3	ಪದ್ಮಾವತಿ ದೇವಿಗೆ ಚಿನ್ನದ ಕಂಠೀಹಾರ	01	02-09-15 ತೊಲ
4	ಬೆಳ್ಳಿಯ ಸಿದ್ಧಿ	01	113-08-0 ತೊಲ
5	ಬೆಳ್ಳಿಯ ದೀವಟಿಗೆ	02	64-12-0 ತೊಲ
6	ಬೆಳ್ಳಿಯ ಗಂಗಳ	01	107-4-0 ತೊಲ
7	ಬೆಳ್ಳಿಯ ಚೆಂಬು	02	180-4-0 ತೊಲ
8	ದಂತ ಪಲ್ಲಕ್ಕಿ (ಚಿನ್ನ)	01	13-14-6 ತೊಲ
9	ಬೆಳ್ಳಿಯ ಗಜ ವಾಹನ	01	294 ಸೀರ್ಸ್ ಬೆಳ್ಳಿ ಮತ್ತು 1 ಸೀರ್ಸ್ ಚಿನ್ನ
10	ಸರ್ವ ಭೂಪಾಲ ವಾಹನ	01	7-0-6 ತೊಲ ಬೆಳ್ಳಿ
11	ಚಿನ್ನದ ಲಕ್ಷ್ಮೀಹಾರ	01	389-0-0 ತೊಲ
12	ಬೆಳ್ಳಿಯ ಅಖಂಡ	01	1889-9-0 ತೊಲ
13	ಬೆಳ್ಳಿಯ ಆರತಿ ತಟ್ಟೆ	01	73-9-0 ತೊಲ
14	ಬೆಳ್ಳಿಯ ನಕ್ಷತ್ರ ತಟ್ಟೆ	01	191-8-0 ತೊಲ
15	ಬೆಳ್ಳಿಯ ನವನೀತ ತಟ್ಟೆ	01	86-12- ತೊಲ
16	ಬೆಳ್ಳಿಯ ನವನೀತ ಆರತಿ ಕಪ್	01	10-8-0 ತೊಲ
17	ಚಿನ್ನದ ಸಾಲಿಗ್ರಾಮ ಹಾರ	01	488 1/4 ತೊಲ ಬಂಗಾರ

18	ಬೆಳ್ಳಿಯ ತಟ್ಟೆ	01	73 1/4 ತೊಲ
19	ಬೆಳ್ಳಿಯ ತಟ್ಟೆ	01	124 ತೊಲ
20	ಬೆಳ್ಳಿಯ ಮೊಹರ್ಜಾಲ	04	
21	ಮಕರ ಕಂಠೀಹಾರ (ಗಂಡುಬೇರುಂಡ)		
22	ವಜ್ರ ಮತ್ತು ಕೆಂಪು ಮಕರ ಕಂಠೀಹಾರ		
23	ವೈಜಯಂತಿ ಮಾಲೆ		
24	ಸೂರ್ಯಪ್ರಭ ವಾಹನ		
25	ಚಂದ್ರಪ್ರಭ ವಾಹನ		
26	ಬೆಳ್ಳಿಯ ಗರುಡ ವಾಹನ		

ಮೇಲ್ಕಂಡ ಆಭರಣ ಹಾಗೂ ಪೂಜಾ ಕೈಂಕರ್ಯದ ವಸ್ತುಗಳ ಅಂದಾಜು ಮೊತ್ತವನ್ನು ನಿರ್ಧರಿಸಿರುವುದಿಲ್ಲ.

ಆ) ಶ್ರೀ ತಿರುಪತಿ-ತಿರುಮಲ ದೇವಸ್ಥಾನದಲ್ಲಿ ಕರ್ನಾಟಕ ವ್ಯಾಪ್ತಿಯಲ್ಲಿರುವಂತಹ ಆಸ್ತಿಯ ವಿವರ ಒದಗಿಸುವುದು;

ತಿರುಮಲದಲ್ಲಿನ ಟೌನ್ ಸರ್ವೆ 2 ಬಿ ವಾರ್ಡ್ ನಂ. 4 ಬ್ಲಾಕ್-ಬಿ ಆರ್.ಎಸ್.ನಂಬರ್ 592/ಭಾಗ, 636-4, 637/1, 637/2, 637/3, 637/4 ರಲ್ಲಿ ಕರ್ನಾಟಕ ಸರ್ಕಾರದ ವಶದಲ್ಲಿ ಒಟ್ಟು 7.05 ಎಕರೆ ಜಮೀನು ಇರುತ್ತದೆ.

ತಿರುಪತಿಯಲ್ಲಿ ಸರ್ವೆ ನಂಬರ್ 4253 ಹಾಗೂ 4254 ರಲ್ಲಿನ ರವಿನ್ಯೂ ವಾರ್ಡ್ ಸಂಖ್ಯೆ 11 ರಲ್ಲಿ 46.5 ಸೆಂಟ್ಸ್ ವಿಸ್ತೀರ್ಣದ ಸ್ವಂತ ಸ್ಥಳವನ್ನು ಹೊಂದಿರುತ್ತದೆ.

ತಿರುಚಾನೂರಿನಲ್ಲಿ 16.25 ಸೆಂಟ್ಸ್ ವಿಸ್ತೀರ್ಣದ ಜಮೀನು ಇರುತ್ತದೆ.

ಇ) ಶ್ರೀ ಕ್ಷೇತ್ರಕ್ಕೆ ರಾಜ್ಯ ಸರ್ಕಾರದಿಂದ ಒದಗಿಸುತ್ತಿರುವಂತಹ ಸೌಕರ್ಯಗಳೇನು; ವರ್ಷವಾರು ವಿವರ ಹಾಗೂ ಅಂದಾಜು ವೆಚ್ಚ ಎಷ್ಟು;

ಶ್ರೀ ಕ್ಷೇತ್ರಕ್ಕೆ ರಾಜ್ಯ ಸರ್ಕಾರದಿಂದ ಪ್ರತಿ ವರ್ಷ ರೂ.3.00 ಲಕ್ಷ ಅನುದಾನವನ್ನು ಒದಗಿಸುತ್ತಿದ್ದು, ಸದರಿ ಅನುದಾನದಿಂದ ತಿರುಮಲದ ಶ್ರೀ ವೆಂಕಟೇಶ್ವರಸ್ವಾಮಿಯವರಿಗೆ ಪೂಜಾ ಸಾಮಗ್ರಿ ಹಾಗೂ ನೈವೇದ್ಯಾಕ್ಕಾಗಿ ಪಡಿತರ ಸಾಮಾಗ್ರಿಗಳನ್ನು ಒದಗಿಸಲು ಬಳಸಲಾಗುತ್ತಿದೆ.

ಈ) ಶ್ರೀ ಕ್ಷೇತ್ರಕ್ಕೆ ರಾಜ್ಯ ಸರ್ಕಾರದ ವತಿಯಿಂದ ಭಕ್ತಾದಿಗಳಿಗೆ, ಯಾತ್ರಾರ್ಥಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳು ಯಾವುವು (ವಿವರ ಒದಗಿಸುವುದು)?

ರಾಜ್ಯ ಸರ್ಕಾರದ ವತಿಯಿಂದ ಭಕ್ತಾದಿಗಳಿಗೆ ಪ್ರಮುಖವಾಗಿ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ವಸತಿ ಸೌಲಭ್ಯಕ್ಕಾಗಿ ರಾಜ್ಯ ಛತ್ರದಲ್ಲಿ ಕರ್ನಾಟಕ ಪ್ರವಾಸಿ ಸೌಧದಲ್ಲಿ 86 ಕೊಠಡಿಗಳು, 50 ಕೊಠಡಿಗಳನ್ನೊಳಗೊಂಡ 17 ಕುಠೀರಗಳು, 08 ಕೊಠಡಿಗಳನ್ನು ಒಳಗೊಂಡ ಅತಿಥಿಗೃಹ ಹಾಗೂ 24 ಕೊಠಡಿಗಳನ್ನು ಒಳಗೊಂಡ ಕರ್ನಾಟಕ ಕಲ್ಯಾಣ ಮಂಟಪವಿದ್ದು, ಎಲ್ಲಾ ಕೊಠಡಿಗಳನ್ನು ಯಾತ್ರಿಕರಿಗೆ ಹಂಚಿಕೆ ಮಾಡಲಾಗುತ್ತಿದೆ. ಅಲ್ಲದೆ 01 ಕಲ್ಯಾಣ ಮಂಟಪವಿದ್ದು, ಮದುವೆ ಹಾಗೂ ಇತರೆ ಶುಭ ಸಮಾರಂಭಗಳಿಗೆ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಒದಗಿಸಲಾಗುತ್ತಿದೆ.

ಸಂಖ್ಯೆ:ಕಂಇ 20 ಮುಸಪ್ರ 2009

(ಮಾಲೂರು ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
ವಸತಿ ಹಾಗೂ ಮುಜರಾಯಿ ಸಚಿವರು.

ಕರ್ನಾಟಕ ವಿಧಾನ ಸಭೆ

280 ಶ್ರೀ.ಸಂಪಂಗಿ.ಎನ್.(ಬಾಗೇಪಲ್ಲಿ)

ಅ) ಉದ್ಯೋಗ ಖಾತರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದ ಅನುದಾನವೆಷ್ಟು; ರಾಜ್ಯ ಸರ್ಕಾರದಿಂದ ಯೋಜನೆಗೆ ನೀಡಿದ ಅನುದಾನವೆಷ್ಟು; ಕಳೆದ 2 ವರ್ಷಗಳಲ್ಲಿ ಈ ಯೋಜನೆಗೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ನೀಡಿದ ಮೊತ್ತವೆಷ್ಟು;

ಕೇಂದ್ರ ಸರ್ಕಾರದಿಂದ ಉದ್ಯೋಗ ಖಾತರಿ ಯೋಜನೆಗೆ ಬಂದ ಅನುದಾನದ ವಿವರ, ಸದರಿ ಅನುದಾನಕ್ಕೆ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡಿದ ವಿವರಗಳನ್ನು ಈ ಮುಂದಿನಂತೆ ನೀಡಿದೆ.

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ವರ್ಷ	ಬಿಡುಗಡೆ		
		ಕೇಂದ್ರದ ಪಾಲಿನ ಅನುದಾನ	ರಾಜ್ಯದ ಪಾಲಿನ ಅನುದಾನ	ಒಟ್ಟು ಮೊತ್ತ
1	2006-07	24250.39	2033.752	26284.142